**ದಿನಾಂಕಃ 03-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವರೆದ ಮುಖ್ಯ ವಿಚಾರಣೆ: 5 ನೇ ಎದುರುದಾರರ ಪರ ಶ್ರೀ. ವಿ.ಎಸ್.ಎ.ವಕೀಲರಿಂದಃ**

ನಿ.ಆರ್-3 : ಅಧಿಕಾರ ಪತ್ರ,

ನಿ.ಆರ್-4 : ವಿಮಾ ಪಾಲಿಸಿ,

ಎಂದು ಗುರುತಿಸಲಾಯಿತು.

5 ನೇ ಎದುರುದಾರರ ವಿರುದ್ದ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಬಿ.ಹೆಚ್.ಬಿ. ವಕೀಲರಿಂದಃ**

ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ಅಪಘಾತ ಎರಡು ಮೋಟಾರ್ ವಾಹನಗಳ ನಡುವೆ ಆಗಿರುತ್ತದೆ ಎಂದರೆ ಸರಿ. ಕೆಎ.04/ಜೆಕೆ.9650 ಮೋಟಾರ್ ಸೈಕಲ್ ಗೆ ನಮ್ಮ ವಿಮಾ ಕಂಪನಿಯಿಂದ ವಿಮಾ ಪಾಲಿಸಿ ನೀಡಲಾಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಸದರಿ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ಪಾಲಿಸಿ ಪ್ಯಾಕೇಜ್ ಪಾಲಿಸಿಯಾಗಿತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಹೇಳುತ್ತಾರೆ. ವಿಮಾ ಪಾಲಿಸಿ ಚಾಲ್ತಿಯಲ್ಲಿದ್ದು ಅದು ಪ್ಯಾಕೇಜ್ ಪಾಲಿಸಿಯಾಗಿರುವುದರಿಂದ ಅರ್ಜಿದಾರರಿಗೆ ಪರಿಹಾರ ಕೊಡಲು ನಮ್ಮ ಕಂಪನಿಯವರೇ ಬಾದ್ಯರಾಗಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಕೊಡಲು ಬಾದ್ಯರಾಗಿದ್ದರೂ ಸಹ ಆ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಆರ್.ಎಸ್.ಎಸ್. ವಕೀಲರಿಂದಃ**

ಪೋಲಿಸರು ನಮ್ಮ ಕಂಪನಿಯಲ್ಲಿ ವಿಮೆಗೆ ಒಳಪಟ್ಟ ಮೋಟಾರ್ ಸೈಕಲ್ ನ

ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಎರಡೂ ವಾಹನಗಳ ಚಾಲಕರುಗಳ ತಪ್ಪಿನಿಂದ ಅಪಘಾತವಾಗಿದೆ ಎಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಅರ್ಜಿದಾರರು ಅಪಘಾತದ ಸಮಯದಲ್ಲಿ ಕೆಎ.04/ಜೆಕೆ.9650 ಮೋಟಾರ್ ಸೈಕಲ್ ಚಲಾಯಿಸುತ್ತಿದ್ದರು. ಅಪಘಾತ 1 ನೇ ಎದುರುದಾರನ ವಾಹನದ ಚಾಲಕನ ತಪ್ಪಿನಿಂದ ಆಗಿರದ ಕಾರಣ ಪರಿಹಾರ ಕೊಡಲು ನಾವೇ ಬಾದ್ಯರಾಗಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.